

ತಟಸ್ಥವಾಗಿ ನಿಂತುಬಿಟ್ಟಿದ್ದವು. ದುರದೃಷ್ಟವಶಾತ್ ಪ್ರಸ್ತುತ ಪರಿಸ್ಥಿತಿ ಬೇರೆ ಇದೆ. ರೈನೊ ಸಂತತಿ ಅಳಿವಿನಂಚಿನಲ್ಲಿದೆ. ಈ ಪ್ರಾಣಿಗಳ ಕೊಂಬುಗಳಲ್ಲಿ ಹಲವು ಕಾಯಿಲೆಗಳ ಗುಣಪಡಿಸಬಲ್ಲ ಔಷಧವಿದೆ ಎನ್ನುವ ಕಾರಣಕ್ಕಾಗಿ ರೈನೊ ಕೊಂಬು ಅತ್ಯಂತ ಬೇಡಿಕೆಯಲ್ಲಿದೆ.

ಪ್ರಾಣಿಪ್ರಪಂಚದ ಸೋಜಿಗಗಳು, ಆನಂದಮಯ ಕ್ಷಣಗಳು ಜೊತೆಗೆ ಅವುಗಳ ಬಗ್ಗೆ ಮರುಕ – ಎಲ್ಲವನ್ನೂ ನಾವು ಮೂವರೂ ನಮಗೆ ತಿಳಿದಷ್ಟು ಹಂಚಿಕೊಳ್ಳುತ್ತಾ ಪ್ರಯಾಣ ಮುಂದುವರೆಸಿದೆವು.

ಚಿರತೆಗಳು ಮರಗಳನ್ನು ಅತಿ ಸುಲಭವಾಗಿ ಏರಿಬಿಡುತ್ತವೆ. ದಟ್ಟಮರಗಳ ಎಲೆಗಳ ನಡುವೆ ಅವುಗಳನ್ನು ಹುಡುಕುವುದು ಸುಲಭವಲ್ಲ. ನಮ್ಮ ಚಿರತೆರಾಯ ಬಾಯಲ್ಲಿ ಬೇಟೆಯಾಡಿದ ಯಾವುದೋ ಪ್ರಾಣಿಯನ್ನು ಕಚ್ಚಿ ಹಿಡಿದು ಟೊಂಗೆಯೊಂದರ ಮೇಲೆ ಉಪಸ್ಥಿತನಾಗಿದ್ದ. ಚಿರತೆ ಉಳಿದ ಮಾಂಸಹಾರಿ ಪ್ರಾಣಿಗಳಿಗೆ ತನ್ನ ಆಹಾರ ಕಾಣಬಾರದೆಂದು ಟೊಂಗೆಗಳಲ್ಲಿ ಮುಚ್ಚಿಡುತ್ತದೆ. ತನ್ನ ಮರಿಗಳನ್ನು ಕರೆತಂದು ಉಣಬಡಿಸುತ್ತದೆ.

ಅದು ನಡುಮಧ್ಯಾಹ್ನದ ಸಮಯ. ನಮ್ಮ ಹೊಟ್ಟೆ ಚುರುಗುಟ್ಟುತ್ತಿತ್ತು. ಕಾಡಿನ ನಡುವಿನ ಹೋಟೆಲ್ ಕ್ಯಾಟಲ್ ಬ್ಯಾರನ್‌ನಲ್ಲಿ ನಮ್ಮ ಸಸ್ಯಾಹಾರದ ಊಟ ಮುಗಿಸಿದೆವು. ರುಚಿಯಾದ ಐಸ್ ಕ್ರೀಂ ತಿಂದೆವು. ಅರ್ಧಗಂಟೆಯ ನಂತರ ನಮ್ಮ ಗಾಡಿ ಬೇರೆ ಜಾಡು ಹಿಡಿದು ಹೊರಟಿತು.

## ಒಂದು ಕ್ಷಣದ ವಿಸ್ಮಯ

ನಿರ್ಜನವಾದ ಮಣ್ಣಿನ ರಸ್ತೆಯಲ್ಲಿ ಮುಂದುವರೆದಂತೆ, ದೂರದಲ್ಲಿ ಅದುವರೆಗೆಲ್ಲೂ ಕಾಣದಷ್ಟು ವಾಹನಗಳು ಕಿಕ್ಕಿರಿದಿದ್ದವು. ಕೀಗನ್ ತನ್ನ ಪಕ್ಕದ ವಾಹನಗಳಲ್ಲಿ ಕಂಡ ಸಹೋದ್ಯೋಗಿಗಳನ್ನು ತಮ್ಮ ಕೋಡ್ ಭಾಷೆಯಲ್ಲಿ 'ಮುಂದೇನಿದೆ' ಎಂದು ವಿಚಾರಿಸಿದ. ಅವನ ಮುಖವರಳಿತ್ತು. ಕಣ್ಣು, ಕಿವಿಗಳನ್ನು ಮತ್ತಷ್ಟು ಚುರುಕುಗೊಳಿಸಿದೆವು. ನಾವು ತಲುಪಿದ ಜಾಗದಿಂದ ಕೆಳಗೆ ಕಾಣುತ್ತಿದ್ದ ಪೊದೆಗಳಲ್ಲಿ, ಮರಗಳಲ್ಲಿ ಏನು ಹುಡುಕಬೇಕು ಎಂದು ತಿಳಿಯದಾಯ್ತು. ನಾನು ತಗ್ಗಿನಲ್ಲಿದ್ದ ಪೊದೆಗಳತ್ತಲೇ ಕಣ್ಣು ಕೀಲಿಸಿ ಕೂತಿದ್ದೆ. ನನ್ನ ಹೆಬ್ಬಯಕೆಯನ್ನು ಸಾಕಾರಗೊಳಿಸಲೆಂದೇ ರಾಜಠೀವಿಯಲ್ಲಿ 'ಇಗೋ, ನಿನ್ನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷಳಾದೆ' ಎಂದು ಆಶ್ವಾಸನೆ ನೀಡುವಂತೆ, ಹೆಣ್ಣುಸಿಂಹ ಒಂದು ಕ್ಷಣದಲ್ಲಿ ಎದುರಿನ ಪೊದೆಗಳಲ್ಲಿ ಕರಗಿಹೋದಳು. ನಾ ಕಂಡ ದೃಶ್ಯವೈಭವಕ್ಕೆ ಬಾಯಿ ಕಟ್ಟಿ ಹೋಯಿತು. ಸಾವರಿಸಿಕೊಂಡು 'ಅಗೋ ಅಲ್ಲಿ' ಎಂದು ಕಿರುಚಿದೆ. ಕೀಗನ್ ತನ್ನ ಪುಟ್ಟಕಣ್ಣುಗಳನ್ನು ಮತ್ತಷ್ಟು ಕಿರಿದಾಗಿಸಿ, ನನ್ನನ್ನು ಸಂಶಯಿಸುತ್ತಾ 'ನಿಜಕ್ಕೂ ನೋಡಿದಿರಾ' ಎಂದ. ನನ್ನ ಗಂಡನ ಮುಖದಲ್ಲೂ ಆಶ್ಚರ್ಯ, ಅದೇ ಅನುಮಾನ. ಹೌದೆಂದು ಗೋಣಾಡಿಸಿದೆ. ಹೆಣ್ಣು ಸಿಂಹದ ಗಂಭೀರ ನಡಿಗೆಯ ಆ ದೃಶ್ಯ ಕೇವಲ ನನ್ನ ಕಣ್ಣುಗಳಿಗಷ್ಟೇ ಸಂಯೋಜಿತಗೊಂಡಿತ್ತು. ಕೀಗನ್ ಅಷ್ಟರಲ್ಲೇ, ಗುರುಪ್ರಸಾದ್‌ಗೆ ಕೊರಗಬೇಡಿರೆಂದು ಆಶ್ವಾಸನೆ ನೀಡಿ, ಅದೇ ರಸ್ತೆಯ ಇನ್ನೊಂದು ತುದಿಗೆ ಕರೆದೊಯ್ದನು. ಅಲ್ಲಿ ಕಂಡದ್ದು ಒಂದಲ್ಲ, ಎರಡು ಸಿಂಹಗಳು. ರಸ್ತೆಯಲ್ಲಿ ತಮ್ಮನ್ನು ನೋಡಲು ನಡೆಸುತ್ತಿದ್ದ ಪ್ರವಾಸಿಗರ ಹರಸಾಹಸದ ಬಗ್ಗೆ ದಿವ್ಯನಿರ್ಲಕ್ಷ್ಯದಿಂದ ಕೂತಿದ್ದವು.

ಆಫ್ರಿಕಾ ಜನಾಂಗದವರು ಸಿಂಹದ ಚಿತ್ರಪಟದಲ್ಲಿ ಕಾಣುವ ಅದರ ಕಣ್ಣುಗಳಿಗೆ ದೃಷ್ಟಿ ಕೂಡಿಸುವುದಿಲ್ಲ. ಸಿಂಹದ ಕಣ್ಣುಗಳು ತಮ್ಮ ಆತ್ಮ ಶೋಧಿಸಬಲ್ಲವು ಎಂಬ ಭೀತಿ ಅವರಿಗಿದೆ.

ಅಂದಿನ ಸಂಚಾರ ಮುಗಿದಾಗ ಮನಸ್ಸು ಸಂತಸದಿಂದ ತುಂಬಿತ್ತು. ಮಾರನೇ ದಿನ ನಮ್ಮ ಕಡೆಯ ದಿನವಾದ್ದರಿಂದ ನಸುಕಿನ ಐದುಕಾಲಿಗೆ ಹೊರಡಬೇಕಾಗಿತ್ತು.

ಕಾಡೆಮ್ಮೆಗಳು ದೈತ್ಯಶಕ್ತಿ ಹೊಂದಿರುತ್ತವೆ. ತನ್ನ ಎದುರಾಳಿಯನ್ನು ಇರಿದು ಕೊಲ್ಲುತ್ತವೆ. ಮಾರನೇ ದಿನ ಮುಂಜಾವಿನ ಮುಸುಕಿನಲ್ಲಿ, ಕಾಡಿನ ಪ್ರಾರಂಭದಲ್ಲೇ ನಮ್ಮ ಎಡಭಾಗದ ಜೊಂಡುಹುಲ್ಲಿನ ಮೇಲೆ ದಟ್ಟ ಕಪ್ಪುಹೊದಿಕೆ ಹಾಕಿದಂತೆ ಸುಮಾರು ಐವತ್ತಕ್ಕೂ ಹೆಚ್ಚು ಕಾಡೆಮ್ಮೆಗಳು ಹುಲ್ಲು ಮೇಯುತ್ತಿದ್ದವು. ಈ ಶಕ್ತಿಯುತ ಪ್ರಾಣಿಗಳು ನಮಗಿದ್ದ ದೂರದಿಂದ ಮುಗ್ಧವಾಗಿ ಕಂಡವು. ರುದ್ರರಮಣೀಯವಾದ ದೃಶ್ಯವದು. ಮುಂದಿನ ಹಾದಿಯಲ್ಲಿ ಕಂಡ ಬಬೂನ್, ಹೈನಾಗಳ ಕುತೂಹಲದ ಮುಖಭಾವ ನಮಗೆ ಇಷ್ಟವಾಯ್ತು. ಅವುಗಳಿಗೆ 'ನಾವು ಊರಿಗೆ ಹೊರಟಿದ್ದೇವೆ' ಎಂದು ಟಾ ಟಾ ಹೇಳಿದೆವು.

ನಮ್ಮ ಮಾರ್ಗದರ್ಶಿ ಮಹಾಶಯನಿಗೆ ನಮಗೆ ಗಂಡುಸಿಂಹದ ದರ್ಶನ ಮಾಡಿಸುವ ಛಲವಿತ್ತು. ಗುಡ್ಡ–ಬೆಟ್ಟಗಳ ಹಾದಿಯಲ್ಲಿ ವಾಹನ ಸಾಗಿತು. ಬಂಡೆಗಳ ಮೇಲೆ ಏಳುಗಂಟೆ ಬೆಳಗಿನ ಎಳೆಬಿಸಿಲಿನಲ್ಲಿ ಮೈ ಕಾಯಿಸುತ್ತಿದ್ದ ಹೆಣ್ಣುಸಿಂಹದ ಠೀವಿ–ಚೆಲುವು ಮೋಹಕವಾಗಿತ್ತು.

ನಾವು ಕುಳಿತ ವಾಹನ ಗಡಗಡ ಸದ್ದು ಮಾಡುತ್ತಾ ಮಣ್ಣಿನ ರಸ್ತೆಯಲ್ಲಿ ದೂಳೆಬ್ಬಿಸುತ್ತಾ ಸಾಗಿತು. ಇಪ್ಪತ್ನಾಲ್ಕು ಗಂಟೆಗಳು ಗಾಡಿಗಳಲ್ಲಿ ಓಡಾಡಿ ಶಬ್ದ, ವಾಯುಮಾಲಿನ್ಯ ಉಂಟುಮಾಡುವವರು ನಾವು. ವಾಹನಗಳಿಂದ ಇಳಿಯ ಬಾರದು ಎಂಬ ಕಟ್ಟುನಿಟ್ಟಾದ ಕಾನೂನು ಇದ್ದರೂ ಕೆಲವರು ಅಭಯಾರಣ್ಯದ ನಿಯಮಗಳನ್ನು ಉಲ್ಲಂಘಿಸುತ್ತಾರೆ. ಈ ಪರಿಸ್ಥಿತಿಯಲ್ಲಿ ಪ್ರಾಣಿಲೋಕದ ಪ್ರತಿಯೊಂದು ಜೀವಿಯೂ ಮನುಷ್ಯನ ಹೀನಕೃತ್ಯಗಳಿಗೆ ಬಲಿಯಾಗುತ್ತದೆ.

ಅರಣ್ಯಧಾಮದ ಹೊರಗಿರುವ ಫಲಕ **'Its mine, Its Yours'** ಎಂದು ಮನುಷ್ಯಜೀವಿಯ ಸಹನೆಯನ್ನು ಪ್ರಾಣಿಲೋಕವು ವಿನಮ್ರವಾಗಿ ಬೇಡುತ್ತದೆ.

ಕ್ರೂಗರ್ ಅರಣ್ಯಧಾಮದ ಅನುಭವಗಳು ಅವಿಸ್ಮರಣೀಯವಾದದ್ದು. ಮಾರ್ಗದರ್ಶಿ ಕೀಗನ್‌ಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಹೇಳಿದೆವು.

## ಕಾಡಿನಿಂದ ನಾಡಿನತ್ತ

ನಮ್ಮ ಪ್ರಯಾಣದ ಮುಂದಿನ ಭಾಗ ನಾಗರಿಕಪ್ರಪಂಚದೆಡೆಗೆ ಸಾಗಿತು. ಕೇಪ್‌ಟೌನ್ ಒಂದು ಪರ್ಯಾಯ ದ್ವೀಪ. ಮೂರು ಭಾಗಗಳಲ್ಲಿ ಟೇಬಲ್ ಮೌಂಟೇನ್ ಬೆಟ್ಟಗಳ ಸಾಲು, ಒಂದು ಕಡೆ ಅಟ್ಲಾಂಟಿಕ್ ಮಹಾಸಾಗರವಿದೆ. ಊರಿಗೆ ಸೇರಿದ ದಿನವೇ ಪೆಂಗ್ವಿನ್‌ಗಳನ್ನು ಅರಸುತ್ತಾ ಸಮುದ್ರತೀರಕ್ಕೆ ಪ್ರಯಾಣಿಸಿದೆವು. ಅಲ್ಲಿ ಕಂಡಿದ್ದು ಪೆಂಗ್ವಿನ್‌ಮರಿಗಳು. ಪುಟ್ಟದೇಹದ, ಉದ್ದ ರೆಕ್ಕೆಗಳ ಈ ಪಕ್ಷಿಗೆ ಪಾಪ, ಮೈ ಭಾರ!

ಟೇಬಲ್‌ಟಾಪ್ ಪರ್ವತಶ್ರೇಣಿಗಳನ್ನು ಕೇಬಲ್‌ಕಾರ್‌ನಲ್ಲಿ ಸಂಚರಿಸುವುದು ನಮ್ಮ ಮುಂದಿನ ಗುರಿಯಾಗಿತ್ತು. ಅದುವರೆಗೂ ನೋಡಿದ್ದ ಪ್ರಕೃತಿಸೌಂದರ್ಯದ ಮುಂದೆ ಮಾನವನಿರ್ಮಿತ ಕೇಬಲ್‌ಕಾರ್ ಹೇಗೆ ಸರಿಸಾಟಿಯಾದೀತು? ಈ ಭಾಗದ ಮುಖ್ಯ ಆಕರ್ಷಣೆ ಎಂದರೆ ನೆಟ್ಟಗೆ, ಚೂಪಾಗಿ ಕಾಣಿಸುವ ಮತ್ತೊಂದು ಬೆಟ್ಟದ ತುದಿಗೆ ಪ್ರಯಾಣಿಸುವುದು. ಆ ಎತ್ತರಕ್ಕೆ ಪ್ರಯಾಣ ರೋಮಾಂಚನವೆನ್ನಿಸುತ್ತದೆ. ಕೇಪ್‌ಟೌನ್, ಸಮುದ್ರತೀರ ಎಲ್ಲವೂ ಆ ಎತ್ತರದಿಂದ ಮನಮೋಹಕವಾಗಿ ಕಾಣುತ್ತದೆ.

ಕ್ಯಾಂಗೋ ಗುಹೆಗಳಲ್ಲಿ ಶಿಲಾಯುಗದ ಆದಿಮಾನವ ನೆಲೆಸಿದ್ದನು ಎನ್ನುವುದಕ್ಕೆ ಸಾಕ್ಷ್ಯಾಧಾರಗಳಿವೆ. ಗುಹೆಗಳ ಒಳಾಂಗಣದಲ್ಲಿ ಕೆತ್ತಿದ ಚಿತ್ರಗಳು ಇದಕ್ಕೆ ಸಾಕ್ಷಿ. ಕೇಪ್‌ಟೌನ್‌ನಿಂದ ಆರುಗಂಟೆಗಳ ರಸ್ತೆ ಪ್ರಯಾಣದ ನಂತರ ಔಡ್ಟ್‌ಶೂರ್ನ್ ಎಂಬ ಪುಟ್ಟ ಚೆಂದದ ಊರಿದೆ. ಹದಿನೆಂಟರ ಶತಮಾನದಲ್ಲಿ ಒಬ್ಬ ರೈತ ಎಣ್ಣೆದೀಪ ಹಿಡಿದು ಈ ಗುಹೆಗಳನ್ನು ಮರು ಶೋಧಿಸುವ ಸಾಹಸವನ್ನು ಮಾಡಿದ್ದಾನಂತೆ. ಈಗಂತೂ ಈ ಗುಹೆಗಳು ಪ್ರವಾಸಿಗರ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿವೆ. ಗುಹೆಗಳ ಮೊದಲ ಐದು ಭಾಗಗಳನ್ನು ಸಾಮಾನ್ಯವಾಗಿ ಸಾಹಸದ ಗುಂಡಿಗೆ ಇರದವರೆಲ್ಲರೂ ನೋಡುತ್ತಾರೆ. ಗುಹೆಯ ಬೆಳಕೇ ಇಲ್ಲದ ಕಿಷ್ಕಿಂಧದ ಜಾಗಗಳು, ತೆವಳುವುದು, ಜಾರಿ ಹೋಗಬೇಕಾದ ಸಾಹಸದ ಭಾಗಗಳಿಗೆ ಧೈರ್ಯವಂತ ಚಾರಣಿಗರು ಹೋಗುತ್ತಾರೆ. ನಮ್ಮ ಮಾರ್ಗದರ್ಶಿ ನಮಗೆ ಗುಹೆಯ ಕತ್ತಲ ಅನುಭವವಾಗಲು ಎಲ್ಲಾ ದೀಪಗಳನ್ನು ಆರಿಸಿಬಿಟ್ಟನು. ಆ ಕ್ಷಣದಲ್ಲಿ ಹೃದಯಬಡಿತ ಲಯ ತಪ್ಪುವುದರಲ್ಲಿ ಸಂಶಯವೇ ಇಲ್ಲ. ಗುಹೆಗಳ ನೈಸರ್ಗಿಕ ಚೆಲುವು ಭಯಂಕರವೆನ್ನಿಸುತ್ತದೆ. ಕೇಪ್‌ಟೌನ್‌ಗೆ ಭೇಟಿ ನೀಡುವ ಪ್ರವಾಸಿಗರು ಈ ಸ್ಥಳ ನೋಡಲೇಬೇಕು.

ಆಸ್ಟ್ರಿಚ್ ಹಕ್ಕಿಗಳ ಧಾಮ ಎನ್ನುವುದು ಈ ಊರಿನ ಮತ್ತೊಂದು ಹೆಗ್ಗಳಿಕೆ. ಆರಡಿ ಎತ್ತರದ ಧಾಂಡಿಗ ಹಕ್ಕಿಗಳು ಗಂಟೆಗೆ ಎಂಬತ್ತು ಕಿ.ಮೀ. ವೇಗದಲ್ಲಿ ಓಡಬಲ್ಲವು. ಪಕ್ಷಿಪ್ರಪಂಚದ ಇದೊಂದು ಹಕ್ಕಿ ಮಾತ್ರ ಹಾರಲಾರದು. ತನಗಿಂತಲೂ ಎತ್ತರ, ಗಾತ್ರವಾಗಿರುವವರನ್ನು ಕಂಡರೆ ಇವಕ್ಕೆ ಹೊಟ್ಟೆಕಿಚ್ಚು. ಕೆರಳಿಸಿದರೆ ಕುಕ್ಕಿ ದಾಳಿ ಮಾಡುತ್ತವೆ. ಯಥಾಪ್ರಕಾರ ಗಂಡು ಆಸ್ಟ್ರಿಚ್‌ನ ಕಡುಗಪ್ಪು ರೆಕ್ಕೆಗಳು, ಕೆಂಪು ವರ್ಣದ ಕೊಕ್ಕು ಸೆಳೆಯಿತು. ನಮ್ಮ ತೆರೆದ ವ್ಯಾನಿನ ಪಕ್ಕದಲ್ಲಿಯೇ 'ಕ್ಯಾಟ್‌ವಾಕ್' ಮಾಡಿದ ಹಕ್ಕಿಗಳು ಚೆಂದ ಕಂಡವು.

ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿನ ಅನುಭವಗಳು ನಮ್ಮ ಒಳಗಣ್ಣು ತೆರೆಸುವಷ್ಟು, ನಮ್ಮ ನಾಗರಿಕ ಮನಸ್ಸನ್ನು ಮರು ವಿಮರ್ಶೆಗೆ ಒಡ್ಡುವಷ್ಟು ಪರಿಣಾಮಕಾರಿಯಾಗಿತ್ತು. ●